ದೂರದಲ್ಲಿ ಬರುತ್ತಿರುವ ಸ್ವಾತಿ ಕಾಣಿಸಿದ್ದಳು. ಅವಳ ಜತೆ ಒಬ್ಬ ಹುಡುಗನೂ ಇದ್ದ. ಅಲ್ಲಿಂದಲೆ ಸದಾನನ್ನು ಗಮನಿಸಿದ ಸ್ವಾತಿ ಅವನೂ ತನ್ನನ್ನು ನೋಡಿದ್ದಾನೆಂದು ಗೊತ್ತಾಗಿ ಹಿಂದಕ್ಕೆ ಹೋಗಲಾರದೆ ಇದೇ ದಾರಿಯಲ್ಲಿ ಬರುತ್ತಿರುವುದು ಅವಳ ನಡಿಗೆಯ ರೀತಿಯಲ್ಲಿಯೇ ಗೊತ್ತಾಗುತ್ತಿತ್ತು. ಅವರು ಹತ್ತಿರ ಬಂದಿದ್ದೇ ಸದಾ ಎದ್ದು ನಿಂತ. ಸ್ವಾತಿಯೇ ಮುಂದೆ ಬಂದು 'ಹಾಯ್ ಸದಾಶಿವಾ... ಹೇಗಿದ್ದಿ?' ಕೇಳಿದಳು. ಅವಳು ಹಾಗೆ ಪೂರ್ತಿ ಹೆಸರನ್ನು ಕರೆದ ನೆನಪೇ ಅವನಿಗಿರಲಿಲ್ಲ. ಹೊಸದೊಂದು ನಾಟಕಕ್ಕೆ ಆಹ್ವಾನಿಸಿದಂತೆ ಭಾಸವಾಗಿ ಸಜ್ಜಾದ. ಸ್ವಾತಿಯನ್ನು ಬೇರೆ ಹುಡುಗನ ಜತೆ ನೋಡಿಯೂ ತನಗೆ ಆಘಾತವಾಗಲಿಲ್ಲ ಎಂಬ ಸಂಗತಿಯೇ ಅವನ ಉಮೇದಿ ಹೆಚ್ಚಿಸಿತು. ಬೇಕಂತಲೇ ಸ್ವಲ್ಪ ಜೋರು ಧ್ವನಿಯಲ್ಲಿ 'ಹೇಯ್... ಸ್ವಾತಿ... ನಾನ್ ಸೂಪರ್ರು. ನೀ ಹೇಗಿದ್ದಿಯೆ? ಎಷ್ಟು ದಿನ ಆಯ್ತು ನಿನ್ನ ನೋಡದೆ? ದಪ್ಪ ಆಗ್ಬಿಟ್ಟಿದೀಯಾ' ಎಂದು ನಕ್ಕು ಅವಳ ಭುಜವನ್ನು ಮೆಲುವಾಗಿ ತಟ್ಟಿದ. ಸ್ವಾತಿ ಒಳಗೊಳಗೇ ಕುಸಿಯುತ್ತಿರುವುದು ಅವಳ ಕಣ್ಣಲ್ಲೇ ಗೋಚರಿಸಿ ಅವನ ಮನಸ್ಸು ವಿಚಿತ್ರವಾಗಿ ಕೆನೆಯಿತು.

'ಮಧು, ದಿಸ್ ಈಸ್ ಸದಾಶಿವ... ಮೈ ಕಾಲೇಜ್ ಮೇಟ್' ಗಲಿಬಿಲಿಯಲ್ಲಿಯೇ ತನ್ನೊಂದಿಗಿನ ಹುಡುಗನಿಗೆ ಪರಿಚಯಿಸಿದಳು. ಆ ಹುಡುಗನ ಬಗ್ಗೆ ತನಗೆ ಹೇಳುವ ಮೊದಲೇ ಸದಾ 'ಓ... ಇವರು ನಿನ್ನ ಸಂಬಂಧಿಕರಾ?' ಕೇಳಿಬಿಟ್ಟ.

ಈಗಂತೂ ಸ್ವಾತಿ ಪೂರ್ತಿ ಕುಸಿದೇ ಹೋದಳು. 'ಅಲ್ಲಾ... ಅಲ್ಲ... ಫ್ರೆಂಡ್...' ಅವಳ ಧ್ವನಿಯಲ್ಲಿ ಬಳಲಿಕೆ ಎದ್ದು ಕಾಣುತ್ತಿತ್ತು. ಆ ಹುಡುಗ ಸ್ವಾತಿಯನ್ನೇ ವಿಚಿತ್ರವಾಗಿ ದಿಟ್ಟಿಸಿದ. 'ಓ.. ಹೌದಾ...' ಎಂದು ರಾಗವಾಗಿ ಹೇಳುತ್ತಾ ಸದಾ ಆ ಹುಡುಗನ ಕೈ ಕುಲುಕಿದ್ದ. ಮತ್ತೆ ಅವಳೇನೂ ಕೇಳದೇ ಇದ್ದರೂ ತಾನೇ ಮುಂದಾಗಿ 'ಒಂದು ಇಂಟರ್ವ್ಯೂ ಇತ್ತು ಬಂದಿದ್ದೆ. ತಕ್ಷಣವೇ ಅಪಾಯಿಂಟ್‌ಮೆಂಟ್ ಲೆಟರ್ ಕೊಟ್ರು. ಮೂವತ್ತು ಸಾವಿರ ಸ್ಟಾರ್ಟಿಂಗ್' ಎಂದು ಅವಳಿಗಷ್ಟೇ ತಿಳಿಯುವಷ್ಟು ನಾಟಕೀಯವಾಗಿ ಸುಳ್ಳು ಹೇಳಿದ್ದ. ಇವನಿಂದ ತಪ್ಪಿಸಿಕೊಂಡು ಹೋದರೆ ಸಾಕು ಎಂಬಂತೆ ಸ್ವಾತಿ ಚಡಪಡಿಸುತ್ತಿರುವಾಗಲೆ 'ಕಾಫಿ ಗೀಫಿ ಕುಡಿಯೋಣ್ವಾ?' ಎಂದು ಬೇಕಂತಲೆ ಆಹ್ವಾನಿಸಿದ. ಅವನ ವ್ಯಂಗ್ಯಕ್ಕೆ ಮತ್ತಷ್ಟು ಅದುರಿದ ಸ್ವಾತಿ 'ಹ್ಹೆ ಹ್ಹೆ... ಇಲ್ಲ ಇಲ್ಲ, ನಾವು ಬೇರೆ ಏನೋ ಪ್ಲ್ಯಾನ್ ಮಾಡಿಕೊಂಡಿದಿವಿ. ಮತ್ಯಾವಾಗಾದರೂ ಸಿಗುವಾ... ಬಾಯ್' ಎಂದು ಪೆಚ್ಚು ನಗು ನಕ್ಕು, ಇನ್ನೂ ತನ್ನನ್ನು ದಿಟ್ಟಿಸುತ್ತಲೇ ಇದ್ದ ಹುಡುಗನ ಕೈ ಹಿಡಿದು ಹೆಚ್ಚು ಕಮ್ಮಿ ಎಳೆದುಕೊಂಡೇ ನಡೆದುಹೋದಳು.

ಸ್ವಾತಿಯ ಗಾಬರಿ ನೋಡಿ ನನ್ನ ಬಗ್ಗೆ ಆ ಹುಡುಗನಿಗೆ ಖಂಡಿತ ಅನುಮಾನ ಬಂದಿರ್ತದೆ. ಕೇಳೇ ಕೇಳ್ತಾನೆ. ಸಿಕ್ಕಿಹಾಕಿಕೊಳ್ತಾಳೆ. 'ಸಿಕ್ಕಾಕೊಂಡು ಸಾಯಲಿ ರಂಡೆ' ಕೊನೆಯ ಮಾತು ತನಗರಿವಿಲ್ಲದೆಯೆ ಬಾಯಿದಾಟಿ ಆಚೆಬಂದಿದ್ದೇ ಸದಾನಿಗೆ ತನ್ನ ಧ್ವನಿ ತನಗೇ ಅಪರಿಚಿತವಾಗಿ ಕೇಳಿಸಿತು. ಮರುಕ್ಷಣ ತಾನಷ್ಟು ಕ್ರೂರವಾಗಿ ನಡೆದುಕೊಳ್ಳಬಾರದಿತ್ತು ಎಂಬ ಪಶ್ಚಾತಾಪ ಭಾವ ಮನಸ್ಸನ್ನು ಆವರಿಸಿ ಹಿಂಸೆ ಮಾಡತೊಡಗಿತು. 'ಒಂದೊಮ್ಮೆ ಅವಳು ಬಿಟ್ಟು ಹೋಗದಿದ್ದರೆ ನಾನೇ ಬಿಡುತ್ತಿದ್ದೆನೇನೋ... ಯಾಕಿಷ್ಟು ವಿಚಿತ್ರವಾಗಿ ನಡೆದುಕೊಂಡೆ? ಯಾರದೋ ಮೇಲಿನ ಆಕ್ರೋಶವನ್ನು ಅವಳ ಮೇಲೆ ತೀರಿಸಿಕೊಳ್ಳುವಷ್ಟು ವಿಕೃತ ಆಗಿಬಿಟ್ಟೆನಾ?' ಸುತ್ತಲಿನ ವಾಹನಗಳ ಚೀರು, ದೂಳು ಮಿಶ್ರಿತ ಗಾಳಿ, ಯಾವುದೋ ನಟಿಯ ತೆರೆದೆದೆಯ ಪೋಸ್ಟರು, ಎಲ್ಲವೂ ತನ್ನನ್ನು ಅಣಕಿಸುತ್ತಿರುವಂತೆಯೆ ತೋರಿತು. ಕೈಲಿದ್ದ ಫೈಲಿನಲ್ಲಿನ ಮಾರ್ಕ್ಸ್ ಕಾರ್ಡ್‌ಗಳೆಲ್ಲ ಸತ್ತುಕೊಳೆತು ನಾರುತ್ತಿರುವಂತೆಯೆ ಭಾಸವಾಗಿ ಹೊಟ್ಟೆ ತೊಳಿಸಿಬಂತು. ಅವತ್ತು ಸಂಜೆಯೇ ಬಟ್ಟೆಗಳನ್ನೆಲ್ಲ